3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 16

ಚಾಸಾ 28

| | |
|---|---|
| ಹೆಸರು | ರವಿ ಟಿ.ಎನ್ |
| ತಂದೆಯ ಹೆಸರು | ಲೇಟ್ ನಾರಾಯಣಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಪಿಎಸ್ಐ, ಮಿಡಿಗೇಶಿ ಪೋ.ಠಾಣೆ, |
| ವಾಸಸ್ಥಳ | ಮಿಡಿಗೇಶಿ |

ಸಾಕ್ಷಿಯನ್ನು ದಿನಾಂಕ 14.07.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು 2016 ರಿಂದ 2021 ರವರೆಗೆ ನಾನು ಮಿಡಿಗೇಶಿ ಪೋ.ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 18.11.2019 ರಂದು ಸಂಜೆ 5 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ದೂರನ್ನು ಸಲ್ಲಿಸಿರುತ್ತಾರೆ. ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಂತರ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರ.ವ.ವರದಿಯನ್ನು ನಿಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.29 ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :</u>**

3) ನಮ್ಮ ಠಾಣಾ ವ್ಯಾಪ್ತಿಯಲ್ಲಿ ಒಟ್ಟು 10 ಬೀಟ್ ಗಳು ಇರುತ್ತವೆ. ಗೂಲಹಳ್ಳಿ ಗ್ರಾಮ ಯಾವ ಬೀಟ್ ನಲ್ಲಿ ಬರುತ್ತದೆ ಎಂದು ನೆನಪಿಲ್ಲ. ಪ್ರತಿಯೊಂದು ಬೀಟ್ ಗೂ ಪೊಲೀಸ್ ಸಿಬ್ಬಂದಿಯನ್ನು ನೇಮಿಸಿರುತ್ತಾರೆ ಎಂದರೆ ಸರಿ. ಅವರ ವ್ಯಾಪ್ತಿಯಲ್ಲಿ ಯಾವುದಾರೂ ಘಟನೆ ಆದರೆ ಠಾಣೆಗೆ ಮಾಹಿತಿ ನೀಡುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಚಾಸಾ.1 ರವರು ದೂರು ನೀಡುವುದಕ್ಕಿಂತ ಮುಂಚೆ ಬೇರೆ ಯಾರೂ ಮಾಹಿತಿಯನ್ನು ಕೊಟ್ಟಿಲ್ಲ. ದೂರನ್ನು ನಾನು ಓದಿರುತ್ತೇನೆ. ಚಾಸಾ.1 ರವರ ಮಾತನ್ನು ಕೇಳಿಕೊಂಡು ಚಾಸಾ.1 ರವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.29 ರವರಿಗೆ ನಾನು ಕಡತವನ್ನು ಸಂಜೆ 5.45 ಗಂಟೆಗೆ ಹಸ್ತಾಂತರಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ